# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 646 |
| ಮಾನ್ಯ ವಿಧಾನ ಪರಿಷತ್ತು ಸದಸ್ಯರ ಹೆಸರು | : | ಶ್ರೀಮತಿ ಹೇಮಲತಾ ನಾಯಕ್ |
| ಉತ್ತರಿಸಬೇಕಾದ ದಿನಾಂಕ | : | 13.12.2024 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಮಾಜ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳ ಸಂಖ್ಯೆ ಎಷ್ಟು; ಪ್ರಸ್ತುತ, ವಸತಿ ಶಾಲೆಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ 821 (ಪರಿಶಿಷ್ಟ ಜಾತಿ-503, ಪರಿಶಿಷ್ಟ ವರ್ಗ-144 ಮತ್ತು ಹಿಂದುಳಿದ ವರ್ಗ-174) ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ವಸತಿ ಶಾಲೆ/ಕಾಲೇಜುಗಳಲ್ಲಿ 211920 ವಿದ್ಯಾರ್ಥಿಗಳ ಸಂಖ್ಯೆ ಮಂಜೂರಾಗಿದ್ದು ಈ ಪೈಕಿ 200710 ವಿದ್ಯಾರ್ಥಿಗಳು ದಾಖಲಾಗಿ ವ್ಯಾಸಂಗ ಮಾಡುತ್ತಿದ್ದಾರೆ, ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ) | 2023-24 ಮತ್ತು 2024-25ನೇ ಸಾಲಿನಲ್ಲಿ ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ನೀಡುವ ಶುಚಿತ್ವ ಕಿಟ್‌ಗಳು ಇಲ್ಲಿಯವರೆಗೆ ತಲುಪದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ತೆಗೆದುಕೊಂಡ ಕ್ರಮಗಳೇನು; ವಿಳಂಬಕ್ಕೆ ಕಾರಣಗಳೇನು; ಒಂದು ವೇಳೆ ವಿತರಿಸುವ ಹಂತದಲ್ಲಿದ್ದರೆ ಯಾವ ಸಮಯದಿಂದ ಕಿಟ್‌ಗಳನ್ನು ವಿತರಿಸಲಾಗುತ್ತಿದೆ; (ಸಂಪೂರ್ಣ ಮಾಹಿತಿ ನೀಡುವುದು) | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ 2023-24ನೇ ಸಾಲಿನಲ್ಲಿ ಶುಚಿ ಸಂಭ್ರಮ ಕಿಟ್‌ಗಳನ್ನು ಪೂರೈಸಲು ಒಟ್ಟಾರೆ ರೂ.27,06,21,477/- ಗಳ ವೆಚ್ಚದಲ್ಲಿ ಖರೀದಿಸಲು ಆದೇಶಿಸಲಾಗಿದ್ದು, ಅದರನ್ವಯ, ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳಿಗೆ ಶುಚಿ ಸಂಭ್ರಮ ಕಿಟ್ ಗಳನ್ನು ಪೂರೈಸಲಾಗಿರುತ್ತದೆ.<br><br>ಪ್ರಸ್ತುತ 2024-25 ನೇ ಸಾಲಿಗೆ ಸಂಬಂಧಿಸಿದಂತೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಶುಚಿ ಸಂಭ್ರಮ ಕಿಟ್‌ಗಳನ್ನು ಒಟ್ಟಾರೆ ರೂ.30,39,31,000/- ಗಳ ವೆಚ್ಚದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಕಲಂ 4(ಜಿ) ರಡಿ ವಿನಾಯಿತಿ ಹೊಂದಿರುವ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ರವರಿಂದ ಖರೀದಿಸಲು ಆದೇಶಿಸಲಾಗಿರುತ್ತದೆ. ಅದರನ್ವಯ, ಸದರಿ ಸಂಸ್ಥೆಗೆ ದಿನಾಂಕ:17.08.2024 ರಂದು ಸರಬರಾಜು ಆದೇಶವನ್ನು ನೀಡಲಾಗಿದ್ದು, ಸದರಿ ಸಂಸ್ಥೆಯವರು ಅಕ್ಟೋಬರ್ ಮಾಹೆಯಲ್ಲಿ ಮೊದಲ ತ್ರೈಮಾಸಿಕ ಅವಧಿಯ ಶುಚಿ ಸಂಭ್ರಮ ಕಿಟ್‌ಗಳನ್ನು 821 ವಸತಿ ಶಾಲೆ/ಕಾಲೇಜುಗಳಿಗೆ ಪೂರೈಸಿರುತ್ತಾರೆ. 2ನೇ ತ್ರೈಮಾಸಿಕ ಅವಧಿಯ ಶುಚಿ ಸಂಭ್ರಮ ಕಿಟ್‌ಗಳ ಸರಬರಾಜು ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |

**ಇ)** ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ಕಿಟ್‌ಗಳನ್ನು ನೀಡಲು ಎಷ್ಟು ಮೊತ್ತವನ್ನು ವೆಚ್ಚ ಮಾಡಲಾಗುತ್ತಿದೆ; ಏಪ್ರಿಲ್-2023 ರಿಂದ ಇಲ್ಲಿಯವರೆಗೆ ಎಷ್ಟು ಮೊತ್ತವನ್ನು ಕಿಟ್‌ಗಳಿಗಾಗಿ ವೆಚ್ಚ ಮಾಡಲಾಗಿದೆ; ಕಿಟ್‌ನಲ್ಲಿ ಯಾವ ಯಾವ ವಸ್ತುಗಳನ್ನು ಸರಬರಾಜು ಮಾಡಲಾಗುತ್ತದೆ (ಪ್ರತಿ ವಸ್ತುಗಳಿಗನುಗುಣವಾಗಿ ದರಗಳ ಪ್ರತ್ಯೇಕ ಮಾಹಿತಿ ನೀಡುವುದು)

ಪ್ರತಿ ವಿದ್ಯಾರ್ಥಿಗೆ ಪ್ರತಿ ಮಾಹೆಗೆ ಬಾಲಕರಿಗೆ ನಿರ್ಮಲ ಕಿಟ್ ರೂ.125/- ಗಳಂತೆ ಹಾಗೂ ಬಾಲಕಿಯರಿಗೆ ಸ್ಫೂರ್ತಿ ಕಿಟ್ ರೂ.155/-ಗಳಂತೆ ವೆಚ್ಚಗಳನ್ನು ಭರಿಸಲಾಗುತ್ತಿದೆ. ಪ್ರತಿ ಶೈಕ್ಷಣಿಕ ವರ್ಷದಲ್ಲಿ ಪ್ರತಿ ಬಾಲಕರಿಗೆ 10 ಮಾಹೆಗಳಿಗೆ ನಿರ್ಮಲ್ ಕಿಟ್ ಗಳನ್ನು ರೂ.1,250/- ಹಾಗೂ ಪ್ರತಿ ಬಾಲಕಿಯರಿಗೆ 10 ಮಾಹೆಗಳಿಗೆ ಸ್ಫೂರ್ತಿ ಕಿಟ್‌ಗಳನ್ನು ರೂ.1,550/- ಗಳಂತೆ ಪೂರೈಸಲಾಗುತ್ತಿದೆ.

ಪ್ರತಿ ಕಿಟ್ ನಲ್ಲಿ ಲಭ್ಯವಿರುವ ವಸ್ತುಗಳು ಹಾಗೂ ಅದಕ್ಕೆ ತಗಲುವ ವೆಚ್ಚದ ವಿವರ ಈ ಕೆಳಕಂಡಂತಿದೆ.

| **ನಿರ್ಮಲ ಕಿಟ್ (ಬಾಲಕರಿಗೆ)** | **ಪರಿ ಮಾಣ** | **ಸರಬರಾಜು ದರ (ರೂ.ಗಳಲ್ಲಿ)** |
|---|---|---|
| **ಉತ್ಪನ್ನಗಳ ವಿವರ** | | |
| ಮೈಸೂರ್ ಸ್ಯಾಂಡಲ್ ಸೋಪ್ 125 ಗ್ರಾಂ | 1 | 54.00 |
| ಮೈಸೂರ್ ಸ್ಯಾಂಡಲ್ ಡಿಟರ್ಜೆಂಟ್ ಕೇಕ್ 150 ಗ್ರಾಂ | 2 | 20.00 |
| ಮೈಸೂರ್ ಸ್ಯಾಂಡಲ್ ಕೊಬ್ಬರಿ ಎಣ್ಣೆ 100 ಗ್ರಾಂ | 1 | 27.00 |
| ಟೂತ್ ಪೇಸ್ಟ್ 100 ಗ್ರಾಂ ಮತ್ತು ಟೂತ್ ಬ್ರಷ್ (3 ತಿಂಗಳಿಗೆ 1 ಬ್ರಷ್) | 1 | 24.00 |
| **ಒಟ್ಟು** | | **125.00** |
| **ಸ್ಫೂರ್ತಿ ಕಿಟ್ (ಬಾಲಕಿಯರಿಗೆ)** | | |
| ಮೈಸೂರ್ ಸ್ಯಾಂಡಲ್ ಸೋಪ್ 125 ಗ್ರಾಂ | 1 | 54.00 |
| ಮೈಸೂರ್ ಸ್ಯಾಂಡಲ್ ಡಿಟರ್ಜೆಂಟ್ ಕೇಕ್ 150 ಗ್ರಾಂ | 2 | 20.00 |
| ಮೈಸೂರ್ ಸ್ಯಾಂಡಲ್ ಟಾಲ್ಕಂ ಪೌಡರ್ 50 ಗ್ರಾಂ | 1 | 18.00 |
| ಮೈಸೂರ್ ಸ್ಯಾಂಡಲ್ ಕೊಬ್ಬರಿ ಎಣ್ಣೆ 150 ಗ್ರಾಂ | 1 | 39.00 |
| ಟೂತ್ ಪೇಸ್ಟ್ 100 ಗ್ರಾಂ ಮತ್ತು ಟೂತ್ ಬ್ರಷ್ (3 ತಿಂಗಳಿಗೆ 1 ಬ್ರಷ್) | 1 | 24.00 |
| **ಒಟ್ಟು** | | **155.00** |

**ಈ)** ಪ್ರಸ್ತುತ ಕಿಟ್‌ಗಳನ್ನು ವಿತರಿಸುವ ಕೆಲಸ ಯಾವ ಹಂತದಲ್ಲಿದೆ; ಕಿಟ್‌ಗಳನ್ನು ನೀಡಲು ವಿಳಂಬವಾದರೇ ವಿದ್ಯಾರ್ಥಿಗಳಿಗೆ ಶುಚಿತ್ವದ ಕೆಲಸವು ಸವಾಲಾಗಿ ಪರಿಣಮಿಸುವುದಿಲ್ಲವೇ; ಕಾಲ ಕಾಲಕ್ಕೆ ಕಿಟ್‌ಗಳನ್ನು ಸರಬರಾಜು ಮಾಡದೇ ಇರಲು ಕಾರಣಗಳೇನು; ಶೈಕ್ಷಣಿಕ ವರ್ಷ ಮುಗಿದ ಮೇಲೆ ಕಿಟ್ ವಿತರಿಸುವ ಕಾರ್ಯ ಮಾಡುವುದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗುವುದಿಲ್ಲವೇ; (ಸಂಪೂರ್ಣ ಮಾಹಿತಿ ನೀಡುವುದು).

ಪ್ರಸ್ತುತ 2024-25ನೇ ಸಾಲಿಗೆ ಸಂಬಂಧಿಸಿದಂತೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಶುಚಿ ಸಂಭ್ರಮ ಕಿಟ್‌ಗಳನ್ನು ಒಟ್ಟಾರೆ ರೂ.30,39,31,000/- ಗಳ ವೆಚ್ಚದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಕಲಂ 4(ಜಿ) ರಡಿ ವಿನಾಯಿತಿ ಹೊಂದಿರುವ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ರವರಿಂದ ಖರೀದಿಸಲು ಆದೇಶಿಸಲಾಗಿರುತ್ತದೆ. ಅದರನ್ವಯ, ಸದರಿ ಸಂಸ್ಥೆಗೆ ದಿನಾಂಕ:17.08.2024 ರಂದು ಸರಬರಾಜು ಆದೇಶವನ್ನು ನೀಡಲಾಗಿದ್ದು, ಸದರಿ ಸಂಸ್ಥೆಯವರು ಅಕ್ಟೋಬರ್ ಮಾಹೆಯಲ್ಲಿ ಮೊದಲ ತ್ರೈಮಾಸಿಕ ಅವಧಿಯ ಶುಚಿ ಸಂಭ್ರಮ ಕಿಟ್‌ಗಳನ್ನು 821 ವಸತಿ ಶಾಲೆ/ಕಾಲೇಜುಗಳಿಗೆ ಪೂರೈಸಿರುತ್ತಾರೆ. 2ನೇ ತ್ರೈಮಾಸಿಕ ಅವಧಿಯ ಶುಚಿ ಸಂಭ್ರಮ ಕಿಟ್‌ಗಳ ಸರಬರಾಜು ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಸರ್ಕಾರದ ಬೊಕ್ಕಸಕ್ಕೆ ಯಾವುದೇ ನಷ್ಟ ಉಂಟಾಗುವುದಿಲ್ಲ.

| | | |
|---|---|---|
| **ಉ)** | ಸದರಿ ವಸತಿ ಶಾಲೆಗಳಿಗೆ ಪಠ್ಯಪುಸ್ತಕಗಳನ್ನು ಹಾಗೂ ಇನ್ನಿತರ ವಿದ್ಯಾರ್ಥಿಗಳ ಉಪಯುಕ್ತ ವಸ್ತುಗಳನ್ನು ಸರಿಯಾದ ಸಮಯದಲ್ಲಿ ಸರಬರಾಜು ಮಾಡಲಾಗಿದೆಯೇ; ಮಾಡಿದ್ದಲ್ಲಿ ದಾಖಲೆಗಳ ಸಮೇತ ಮಾಹಿತಿ ನೀಡುವುದು; ಇಲ್ಲದಿದ್ದಲ್ಲಿ, ಯಾವ ಕಾರಣಕ್ಕಾಗಿ ವಿಳಂಬ ಮಾಡಲಾಗುತ್ತಿದೆ; ವಿಳಂಬ ಧೋರಣೆಯಿಂದ ಮಕ್ಕಳ ಶೈಕ್ಷಣಿಕ ಜೀವನಕ್ಕೆ ತೊಂದರೆ ಮಾಡಿದಂತಾಗುವುದಿಲ್ಲವೇ? | 2024-25ನೇ ಸಾಲಿನಲ್ಲಿ ಪಠ್ಯಪುಸ್ತಕ ಹಾಗೂ ಇನ್ನಿತರ ಉಪಯುಕ್ತ ವಸ್ತುಗಳನ್ನು ಶಾಲಾ ಪ್ರಾರಂಭವಾದ ಹಂತದಲ್ಲಿಯೇ ಒದಗಿಸಲು ಕ್ರಮವಹಿಸಲಾಗಿರುತ್ತದೆ. |

**ಸಕಇ 312 ಎಂಡಿಎಸ್ 2024**

**(ಡಾ|| ಹೆಚ್.ಸಿ. ಮಹದೇವಪ್ಪ )**
**ಸಮಾಜ ಕಲ್ಯಾಣ ಸಚಿವರು**

# ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್ (ಶಿಕ್ಷಕರ ಕ್ಷೇತ್ರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 646 ಕ್ಕೆ ಅನುಬಂಧ

## ಸಂಘದ ಅಧೀನದಲ್ಲಿ 821 ವಸತಿ ಶಾಲೆ/ಕಾಲೇಜುಗಳಲ್ಲಿ 2024-25ನೇ ಸಾಲಿನ ವಿದ್ಯಾರ್ಥಿಗಳ ಮಂಜೂರಾತಿ ಮತ್ತು ದಾಖಲಾತಿ ವಿವರ

| ವರ್ಗ | ವಸತಿ ಶಾಲೆಗಳ ಸಂಖ್ಯೆ | Class 6 | | Class 7 | | Class 8 | | Class 9 | | Class 10 | | Class 11 | | Class 12 | | GRAND TOTAL | |
|---|---|---|---|---|---|---|---|---|---|---|---|---|---|---|---|---|---|
| | | SAN | ADM | SAN | ADM | SAN | ADM | SAN | ADM | SAN | ADM | SAN | ADM | SAN | ADM | SAN | ADM |
| ಪರಿಶಿಷ್ಟ ಜಾತಿ | 503 | 24870 | 22788 | 24820 | 24660 | 24820 | 24430 | 24820 | 23567 | 24820 | 22020 | 4080 | 3808 | 4080 | 3557 | 132310 | 124830 |
| ಪರಿಶಿಷ್ಟ ವರ್ಗ | 144 | 7220 | 6576 | 7130 | 7110 | 7130 | 6987 | 7130 | 6823 | 7130 | 6437 | 400 | 395 | 400 | 369 | 36540 | 34697 |
| ಹಿಂದುಳಿದ ವರ್ಗ | 174 | 8300 | 7709 | 8250 | 8294 | 8120 | 8031 | 7920 | 7582 | 7920 | 7159 | 1280 | 1219 | 1280 | 1189 | 43070 | 41183 |
| | **821** | **40390** | **37073** | **40200** | **40064** | **40070** | **39448** | **39870** | **37972** | **39870** | **35616** | **5760** | **5422** | **5760** | **5115** | **211920** | **200710** |

| ವರ್ಗ | ವಸತಿ ಶಾಲೆ/ ಕಾಲೇಜುಗಳ ಸಂಖ್ಯೆ | ವಿದ್ಯಾರ್ಥಿಗಳ ಮಂಜೂರಾತಿ ಸಂಖ್ಯೆ | | | ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆ | | |
|---|---|---|---|---|---|---|---|
| | | ಬಾಲಕರು | ಬಾಲಕಿಯರು | ಒಟ್ಟು | ಬಾಲಕರು | ಬಾಲಕಿಯರು | ಒಟ್ಟು |
| ಪರಿಶಿಷ್ಟ ಜಾತಿ | 503 | 47850 | 84460 | 132310 | 49246 | 75584 | 124830 |
| ಪರಿಶಿಷ್ಟ ವರ್ಗ | 144 | 11130 | 25410 | 36540 | 11523 | 23174 | 34697 |
| ಹಿಂದುಳಿದ ವರ್ಗ | 174 | 21930 | 21140 | 43070 | 22544 | 18639 | 41183 |
| ಒಟ್ಟು | **821** | **80910** | **131010** | **211920** | **83313** | **117397** | **200710** |